

بِسْمِ اللهِ الرَّحْمَنِ الرَّحِيم

# ವಾಗ್ದತ್ತ ಪುತ್ರ – ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 23–02–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈಗ ಜಮಾಅತ್‌ಗಳಲ್ಲಿ ಯೌಮೇ ಮುಸ್ಲಿಹ್ ಮೌಊದ್ ದಿನಾಚರಣೆ ನಡೆಸಲಾಗುತ್ತಿದೆ. ಫೆಬ್ರವರಿ ದಿನಾಂಕ ಇಪ್ಪತ್ತು ಎಂತಹ ದಿನಾಂಕವೆಂದರೆ ಆ ದಿನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನಿಂದ ಸಮಾಚಾರವನ್ನು ಗಳಿಸಿ ತನಗೊಬ್ಬ ಪುತ್ರ ಜನಿಸುವ ಬಗ್ಗೆ ಶುಭವಾರ್ತೆ ಪ್ರಕಟಿಸಿದ್ದರು. ಅದರ ಬಗ್ಗೆ ಒಂದು ವಿಜ್ಞಾಪನೆ ಪತ್ರವನ್ನು ಪ್ರಸಿದ್ಧೀಕರಿಸಿದ್ದರು. ಈ ವಿಜ್ಞಾಪನೆ ಪತ್ರ 1886 ಫೆಬ್ರವರಿ ದಿನಾಂಕ 20ರಂದು ಪ್ರಕಟಗೊಳಿಸಲಾಯಿತು. ಯೌಮೇ ಮುಸ್ಲಿಹ್ ಮೌಊದ್ ದಿನಾಚರಣೆ ಮಾಡುವುದು ಮತ್ತು ಅದಕ್ಕೆ ಸಂಬಂಧಿಸಿ ಸಭೆಗಳನ್ನು ಜರಗಿಸುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಒಂದು ಬೃಹತ್ತಾದ ಭವಿಷ್ಯವಾಣಿ ಈಡೇರಿರುವುದನ್ನು ಸ್ಮರಿಸಲಿಕ್ಕಾಗಿದೆ. ಆ ದಿನವನ್ನು ನಾವು ಆಚರಿಸುವುದು ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ಜನ್ಮದಿನವನ್ನು ಆಚರಿಸುವುದಕ್ಕೋಸ್ಕರವಲ್ಲ. ನಾನು ಈ ಬಗ್ಗೆ ಈ ರೀತಿ ಸ್ಪಷ್ಟೀಕರಣ ನೀಡುತ್ತಿರುವುದು ಏಕೆಂದರೆ, ಕೆಲವು ಜನರು ಪ್ರಶ್ನಿಸುತ್ತಾರೆ ನಾವು ಯೌಮೆ ಮುಸ್ಲಿಹ್ ಮೌಊದ್ ದಿನಾಚರಣೆ ಮಾಡುತ್ತಿರುವಾಗ ಇತರ ಖಲೀಫರ ಜನ್ಮ ದಿನಾಚರಣೆಯನ್ನು ಏಕೆ ಮಾಡುವುದಿಲ್ಲ ಎಂದು. ಫೆಬ್ರವರಿ ದಿನಾಂಕ 20, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಜನ್ಮ ದಿನವಲ್ಲ ಎಂಬುದನ್ನು ನೀವು ಸ್ಪಷ್ಟವಾಗಿ ಮನವರಿಕೆ ಮಾಡಿಕೊಳ್ಳಬೇಕು. ಅವರು 1889 ಜನವರಿ 12ರಂದು ಜನಿಸಿದರು.

ಈ ವಿಶದೀಕರಣದ ನಂತರ ನಾನು ಮುಸ್ಲಿಹ್ ಮೌಊದರಿಗೆ ಸಂಬಂಧಿಸಿದ ಭವಿಷ್ಯವಾಣಿಯ ಬಗ್ಗೆ ಮಾತನಾಡುವೆನು. ಎಲ್ಲದಕ್ಕಿಂತಲೂ ಮೊದಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಬ್ದಗಳಲ್ಲಿಯೇ ಈ ಭವಿಷ್ಯವಾಣಿಯನ್ನು ನಾನು ನಿಮ್ಮ ಮುಂದೆ ಇರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿರುವ ಪ್ರಕಟಣೆಗಳಿಂದ, ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರನ್ನೇ ಈ ಭವಿಷ್ಯವಾಣಿ ಸೂಚಿಸುತ್ತಿದೆ ಎಂದು ಅವರು ಯೋಚಿಸುತ್ತಿದ್ದರೆಂದು ಸಾಬೀತಾಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಸಹ ಇದೇ ರೀತಿ ಯೋಚಿಸಿದ್ದರು. ಜಮಾಅತಿನ ಕೆಲವು ಪ್ರಸಿದ್ಧ ವ್ಯಕ್ತಿಗಳು ಸಹ ಇದೇ ಅಭಿಪ್ರಾಯ ಹೊಂದಿದ್ದರು. ಈ ಭವಿಷ್ಯವಾಣಿಯಲ್ಲಿ ವಿವಿಧ ವೈಶಿಷ್ಟ್ಯಗಳು ಮತ್ತು ಚಿಹ್ನೆಗಳು ವಿವರಿಸಲಾಗಿದ್ದುವು. ಈ ಚಿಹ್ನೆಗಳು ಈಡೇರಿದ ಬಗ್ಗೆ ಜಮಾಅತಿನ ಜನರು ಮತ್ತು ಅನ್ಯರು ಹೇಗೆ ಅಭಿಪ್ರಾಯ ಪ್ರಕಟಿಸಿದರು, ಅವರು ಹೇಗೆ ಗ್ರಹಿಸಿದರು ಎಂಬುದರ ಬಗ್ಗೆ ಕೆಲವು ಉದಾಹರಣೆಗಳನ್ನು ಈಗ ನಾನು ವಿವರಿಸುವೆನು.

(ಮುಸ್ಲಿಹ್ ಮೌಊದ್ ಭವಿಷ್ಯವಾಣಿಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದ ಶಬ್ದಗಳಲ್ಲಿ ಓದಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಹೇಳಿದರು): ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಭವಿಷ್ಯವಾಣಿಗೆ ಸಂಬಂಧಿಸಿ ಹೇಳಿದರು: ನನ್ನ ಮೊದಲನೆಯ ಮಗ ಮೃತನಾದಾಗ ಅವಿವೇಕಿಗಳಾದ ಮೌಲವಿಗಳು ಅವರ ಸ್ನೇಹಿತರು, ಕ್ರೈಸ್ತರು ಮತ್ತು ಹಿಂದುಗಳು ಅವನು ಮೃತನಾದ ಬಗ್ಗೆ ಬಹಳ ಸಂತೋಷ ಪ್ರಕಟಿಸಿದರು. ಅವರೊಂದಿಗೆ ಪದೇ ಪದೇ ಹೀಗೆ ಹೇಳಲಾಯಿತು. 1886 ಫೆಬ್ರವರಿ ದಿನಾಂಕ 20ರ ಭವಿಷ್ಯವಾಣಿಯಲ್ಲಿ ಒಬ್ಬ ಬಾಲಕ ಮೃತನಾಗುವನು ಎಂಬ ಭವಿಷ್ಯವಾಣಿ ಸಹ ಇತ್ತು ಎಂದು. ಆದುದರಿಂದ ಯಾವುದಾದರೊಬ್ಬ ಹುಡುಗ ಬಾಲ್ಯಕಾಲದಲ್ಲಿ ಮೃತನಾಗುವುದು ಆವಶ್ಯಕವಾಗಿತ್ತು. ಆದರೆ ಈ ಜನರು ಆಕ್ಷೇಪಿಸುವುದನ್ನು ಮುಂದುವರಿಸಿದರು. ಆಗ ಅಲ್ಲಾಹನು ಇನ್ನೊಬ್ಬ ಮಗನ ಬಗ್ಗೆ ಶುಭವಾರ್ತೆ ನೀಡಿದನು. ನಾನು ಪ್ರಕಟಿಸಿದ ಸಬ್‌ಝ್ ಇಸ್ತಿಹಾರ್‌ನಲ್ಲಿ ಏಳನೆಯ ಪುಟದಲ್ಲಿ ಈ ಎರಡನೆಯ ಪುತ್ರ ಜನಿಸುವ ಬಗ್ಗೆ ಶುಭವಾರ್ತೆ ಇದೆ. ನಿನಗೆ ಇನ್ನೊಬ್ಬ ಬಶೀರ್‌ನನ್ನು ನೀಡಲಾಗುವುದು, ಅವನ ಮತ್ತೊಂದು ಹೆಸರು ಮಹ್‌ಮೂದ್ ಎಂದಾಗಿರುವುದು. ಇಂದು 1888 ಸೆಪ್ಟಂಬರ್ ದಿನಾಂಕ 1. ಇಂದಿನ ತನಕ ಅವನು ಜನಿಸಿಲ್ಲ. ಆದರೆ ಅಲ್ಲಾಹನ ವಾಗ್ದಾನ ಪ್ರಕಾರ ಅವನು ನಿಗದಿತ ಕಾಲಾವಧಿಯೊಳಗೆ ಖಂಡಿತವಾಗಿಯೂ ಜನಿಸುವನು. ಭೂಮ್ಯಾಕಾಶಗಳು ಸ್ಥಾನ ಪಲ್ಲಟವಾಗಬಲ್ಲವು ಆದರೆ ಅಲ್ಲಾಹನ ವಾಗ್ದಾನಗಳು ಈಡೇರದಿರುವುದು ಸಾಧ್ಯವೇ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಸ್ಥಾನದ ಬಗ್ಗೆ ಹೇಗೆ ಯೋಚಿಸುತ್ತಿದ್ದರು ಎಂಬುದರ ಕುರಿತು ಒಂದು ವರದಿಯನ್ನು ಈಗ ನಾನು ವಿವರಿಸುವೆನು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ]ರವರು ನಿಧನ ಹೊಂದುವುದಕ್ಕೆ ಆರು ತಿಂಗಳ ಮೊದಲು ಖಾಯಿದ ಯಸ್ಸರ್‌ನಲ್ ಖುರ್‌ಆನಿನ ಲೇಖಕರಾದ ಹಝ್ರತ್ ಫೀರ್ ಮನ್‌ಝೂರ್ ಮುಹಮ್ಮದ್ ಸಾಹಿಬರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಂದಿಗೆ ಹೀಗೆ ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ಇಶ್ತಿಹಾರ್‌ಗಳನ್ನು ಇವತ್ತು ನಾನು ಓದಿದಾಗ ಮಿಯಾಂ ಸಾಹಿಬರೇ ಮುಸ್ಲಿಹ್ ಮೌಊದ್ ಆಗಿರುವರೆಂದು ನನಗೆ ಮನವರಿಕೆಯಾಯಿತು. ಎಂದರೆ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್. ಆಗ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳಿದರು: ನಮಗೆ ಅದು ಮೊದಲಿನಿಂದಲೇ ತಿಳಿದಿದೆ. ನಾವು ಮಿಯಾಂ ಸಾಹಿಬರೊಂದಿಗೆ ಹೇಗೆ ವರ್ತಿಸುತ್ತಿದ್ದೇನೆ ಮತ್ತು ಅವರಿಗೆ

ಗೌರವ ನೀಡುತ್ತಿದ್ದೇವೆ ಎಂದು ನೀವು ನೋಡುವುದಿಲ್ಲವೇ? ಎಂದು ಹೇಳಿದರು. ಫೀರ್ ಸಾಹಿಬರು ಈ ಮಾತುಗಳನ್ನು ಬರೆದು ಹಝ್ರತ್ ಖಲೀಫತುಲ್ ಮಸೀಹರಿಗೆ ಅವರ ಅಂಗೀಕಾರ ಪಡೆಯಲು ಅವರ ಮುಂದೆ ಇರಿಸಿದಾಗ 'ನಾನು ಸಹೋದರ ಫೀರ್ ಮನ್‌ಝೂರ್ ಮುಹಮ್ಮದ್‌ರೊಂದಿಗೆ ಈ ಮಾತುಗಳನ್ನು ಹೇಳಿರುವೆನು' ಎಂದು ಬರೆದು ನೂರುದ್ದೀನ್ 1913 ಸೆಪ್ಟೆಂಬರ್ 10 ಎಂದು ಸಹಿ ಮಾಡಿದರು.

ಫೀರ್ ಸಾಹಿಬರು ಹೇಳುತ್ತಾರೆ: ಮರುದಿನ ಎಂದರೆ 1913 ಸೆಪ್ಟೆಂಬರ್ ದಿನಾಂಕ 11ರಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಮಂಚದಲ್ಲಿ ಮಲಗಿದ್ದಾಗ ನಾನು ಅವರ ಕಾಲುಗಳನ್ನು ಒತ್ತುತ್ತಿದ್ದೆನು. ಸ್ವಲ್ಪ ಹೊತ್ತಿನ ನಂತರ ಯಾವುದೇ ವಿಷಯ ಮಾತನಾಡದೆ ತಾನಾಗಿ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಈ ಭವಿಷ್ಯವಾಣಿ ಮೂಲಕ ಸೂಚಿಸಲ್ಪಟ್ಟವರು ಎಂಬುದನ್ನು ಈಗ ತಾವು ಪ್ರಕಟಿಸಬೇಡಿರಿ. ವಿರೋಧ ಸಂಭವಿಸಿದಾಗ ಪ್ರಕಟಿಸಿರಿ ಎಂದು ಹೇಳಿದರು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ತಾನು ಮುಸ್ಲಿಹ್ ಮೌಊದ್ ಆಗಿರುವೆನು ಎಂದು ಬಹಿರಂಗ ಪ್ರಕಟಣೆ ನೀಡಿದಾಗ ಸಿಯಾಲ್‌ಕೋಟ್ ನಗರದ ನಂಬರ್‌ವನ್ ಮೊಹಲ್ಲದ ನಿವಾಸಿ ಹಿರಿಯರಾದ ಮುಕರ್ರಮ್ ಗುಲಾಮ್ ಹುಸೈನ್ ಸಾಹಿಬ್ ಹೀಗೆ ಬರೆದರು: ನನ್ನ ಪ್ರಿಯ ನಾಯಕರೇ, ಮಾರ್ಗದರ್ಶಕರಾದ ಖಲೀಫತುಲ್ ಮಸೀಹ್ ಸಾನಿ, ಮುಸ್ಲಿಹ್ ಮೌಊದ್ ಅಯ್ಯದಹುಲ್ಲಾಹ್ ಬಿನಸ್ಸಿರಿಲ್ ಅಝೀಝ್, ಅಲ್‌ಫಝ್ಲ್ ಪತ್ರಿಕೆಯ ಜನವರಿ 30ರ ಸಂಚಿಕೆಯನ್ನು ಓದಿ ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅಲ್‌ಹಮ್ದುಲಿಲ್ಲಾಹ್ ಅಲ್ಲಾಹನು ನನ್ನ ಸ್ವಪ್ನವನ್ನು ಸಹ ಸತ್ಯವೆಂದು ತೋರಿಸಿಕೊಟ್ಟಿರುವನು. ಹುಝೂರರಿಗೆ ತಿಳಿದಿರಬಹುದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರು ಜೀವಿಸಿರುವಾಗಲೇ ಅಲ್‌ಫಝ್ಲ್ ಪತ್ರಿಕೆಯ ಕಚೇರಿಯಲ್ಲಿ ಸಿಯಾಲ್‌ಕೋಟ್ ನಗರದ ದಿವಂಗತ ಶಾದೀಖಾನ್ ಸಾಹಿಬರು ಉಪಸ್ಥಿತರಿದ್ದಾಗ ನಾನು ತಮಗೆ ಶುಭಾಶಯ ಕೋರಿ ಹೇಳಿದ್ದೆ: ಒಂದು ಸ್ವಪ್ನದಲ್ಲಿ ನನಗೆ ಹೀಗೆ ತೋರಿಸಲಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರು ನಿಧನ ಹೊಂದಿದ ನಂತರ ತಾವು ಖಲೀಫರಾಗುವಿರಿ, ಜಯಶಾಲಿಯಾಗುವಿರಿ, ತಮಗೆ ವಹೀ ಅವತೀರ್ಣವಾಗುವುದು. ನಾನು ಈ ಸ್ವಪ್ನವನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ವಿವರಿಸಿದಾಗ ಅವರು ಸಂತೋಷದಿಂದ ಅದರ ಸತ್ಯತೆಯನ್ನು ಅಂಗೀಕರಿಸಿದ್ದರು ಮತ್ತು ಹೇಳಿದ್ದರು: ಇದೇ ಕಾರಣದಿಂದ ಅವರನ್ನು ತೀವ್ರವಾಗಿ ವಿರೋಧಿಸಲು ಪ್ರಾರಂಭವಾಗಿದೆ ಎಂದು. ಸಯ್ಯಿದ್ ಹಾಮಿದ್ ಶಾ ಸಾಹಿಬರಿಗೂ ಈ ಸ್ವಪ್ನ ವಿವರಿಸಿದ್ದೆ. ಅಲ್‌ಹಮ್ದುಲ್ಲಿಲಾಹ್ ಈಗ ತಾವು ಸ್ವತಃ ಮುಸ್ಲಿಹ್ ಮೌಊದ್ ಎಂದು ವಾದಿಸಿರುವಿರಿ. (ಹಝ್ರತ್ ಮುಸ್ಲಿಹ್ ಮೌಊದ್ 1944ರಲ್ಲಿ ವಾದಿಸಿದ್ದರು). ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಕಾಲದಲ್ಲಿಯೇ ನನಗೆ ದೃಢ ನಂಬಿಕೆ ಇತ್ತು, ತಾವು ಖಲೀಫ ಮತ್ತು ಮುಸ್ಲಿಹ್ ಮೌಊದ್ ಆಗುವಿರೆಂದು.

ಇದೇ ರೀತಿ ಇನ್ನೊಬ್ಬ ಹಿರಿಯರು ಮುಕರ್ರಮ್ ಸೂಫೀ ಮುತೀಉರ್‌ರಹ್ಮಾನ್ ಬಂಗಾಲಿ, ಹಝ್ರತ್ ಮುಸ್ಲಿಹ್ ಮೌಊದ್(ರ)ರಿಗೆ ಬರೆದ ಪತ್ರದಲ್ಲಿ ಬರೆಯುತ್ತಾರೆ: ನಾನು ಸ್ವಪ್ನದಲ್ಲಿ ಕಂಡೆನು, ಈದ್ ದಿನ ಜನರು ಜಮಾಯಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅತ್ಯಂತ ಎತ್ತರವಾದ ಸ್ಥಳದಲ್ಲಿ ನಿಂತು ಹಸಿರು ನಿಲುವಂಗಿ ಧರಿಸಿ ಖುತ್‌ಬ ನೀಡುತ್ತಿದ್ದಾರೆ. ಖುತ್‌ಬದ ನಂತರ ನಾನು ಹಸ್ತದಾನ ಮಾಡಲು ಮುಂದೆ ಸಾಗಿದಾಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನಲ್ಲ ತಮ್ಮನ್ನು ಕಂಡೆನು. ಎಂದರೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರನ್ನು. ನಾನು ಈ ಸ್ವಪ್ನವನ್ನು ಕ್ಯಾಪ್ಟನ್ ಡಾಕ್ಟರ್ ಬದ್ರುದ್ದೀನ್ ಸಾಹಿಬರಿಗೆ ಮತ್ತು ನನ್ನ ಸಹೋದರ ಜನಾಬ್ ಮೌಲವಿ ಝಿಲ್ಲುರ್‌ರಹ್ಮಾನ್ ಸಾಹಿಬ್, ಮುಬಲ್ಲಿಗ್ ಬಂಗಾಳ್ ಅವರೊಂದಿಗೆ ಸಹ ಹೇಳಿದ್ದೆನು. ಮೌಲವಿ ಝಿಲ್ಲುರ್‌ರಹ್ಮಾನ್ ಸಾಹಿಬ್ ಹೇಳಿದರು: ಹಝ್ರತ್ ಅಮೀರುಲ್ ಮೂಮಿನ್ ಖಲೀಫತುಲ್ ಮಸೀಹರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣವಾದ ಭವಿಷ್ಯವಾಣಿ 'ಅವನು ಸೌಂದರ್ಯ ಮತ್ತು ಔದಾರ್ಯದಲ್ಲಿ ನಿನಗೆ ಹೋಲಿಕೆಯುಳ್ಳವನಾಗುವನು' ಎಂಬುದನ್ನು ಅಲ್ಲಾಹನು ನಿಮಗೆ ತೋರಿಸಿ ಕೊಟ್ಟಿರುವನು.

ಇದೇ ರೀತಿ ಹಝ್ರತ್ ಶೇಖ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್ ಸರ್‌ಸಾವಿ ಹೇಳುತ್ತಾರೆ: ನಾವು ಅನೇಕ ಸಾರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳುವುದಾಗಿ ಆಲಿಸಿದ್ದೇವೆ. 'ಭವಿಷ್ಯವಾಣಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಹುಡುಗ ಮಿಯಾಂ ಮಹ್‌ಮೂದ್' ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಹೀಗೆ ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಮಿಯಾಂ ಮಹ್‌ಮೂದ್‌ನಲ್ಲಿ ಎಷ್ಟು ಧಾರ್ಮಿಕ ಉತ್ಸಾಹವಿದೆಯೆಂದರೆ ನಾನು ಕೆಲವು ಸಾರಿ ಅವರಿಗೋಸ್ಕರ ವಿಶಿಷ್ಟವಾಗಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಅಲ್ಲಾಹನು ಅನುಮತಿ ನೀಡುವ ತನಕ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಾನು ಮುಸ್ಲಿಹ್ ಮೌಊದ್ ಎಂದು ವಾದಿಸಿರಲಿಲ್ಲ. ಅದರ ಬಗ್ಗೆ ಪ್ರಕಟಿಸಲು ಸ್ಪಷ್ಟವಾದ ಅನುಮತಿ ಅಲ್ಲಾಹನಿಂದ ದೊರೆತಾಗ ಅವರು ತಾನು ಮುಸ್ಲಿಹ್ ಮೌಊದ್ ಎಂದು ಪ್ರಕಟಿಸಿದರು. ಆಗ ಅವರು ಹೇಳಿದರು: ವಾಗ್ದತ್ತ ಪುತ್ರನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಕಟಿಸಿದ ಚಿಹ್ನೆಗಳಲ್ಲಿ ಹಲವು ಚಿಹ್ನೆಗಳು ಪೂರ್ಣವಾಗಿರುವ ಕಾರಣ ನಮ್ಮ ಜಮಾಅತಿನ ಅನೇಕ ಜನರು ಹೇಳುತ್ತಿದ್ದರು ಈ ಭವಿಷ್ಯವಾಣಿ ನನ್ನ ಬಗ್ಗೆಯೇ ಎಂದು. ಆದರೆ ನಾನು ಯಾವಾಗಲೂ ಹೇಳುತ್ತಾ ಇದ್ದೆ. ಅಲ್ಲಾಹನು ನನಗೆ ಆದೇಶ ನೀಡುವ ತನಕ ನಾನು ಅಂತಹ ಪ್ರಕಟಣೆ ನೀಡಲಾರೆನು. ಅನಂತರ ಅಲ್ಲಾಹನು ನನ್ನ ನಾಲಗೆಯಿಂದ ಪ್ರಕಟಣೆ ಹೊರಡಿಸುವ ದಿನ ಆಗಮಿಸಿತು.

ಹಝ್ರತ್ ಮುಸ್ಲಿಹ್ ಮೌಊದ್ ತನ್ನ ವಾದವನ್ನು ಪ್ರಕಟಿಸಿದ ಹೋಶಿಯಾರ್‌ಪುರದ ಜಲ್ಸದಲ್ಲಿ ಹೇಳಿದರು: ನಾನು ಅಲ್ಲಾಹನ ಆಜ್ಞೆ ಪ್ರಕಾರ ಆಣೆಹಾಕಿ ಪ್ರಕಟಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಾಮವನ್ನು ಭೂಮಿಯ ಎಲ್ಲೆಗಳ ತನಕ ತಲಪಿಸುವ ವಾಗ್ದತ್ತ ಪುತ್ರ ನಾನಾಗಿದ್ದೇನೆಂದು ಅಲ್ಲಾಹನು ತಿಳಿಸಿರುವನು. ನಂತರ ಲಾಹೋರಿನ ಜಲ್ಸದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ)

ಹೇಳಿದರು: ವಾಹಿದ್ ಮತ್ತು ಖಹ್ಹಾರ್ ಆಗಿರುವ ಅಲ್ಲಾಹನ ಹೆಸರಿನಲ್ಲಿ ನಾನು ಆಣೆ ಹಾಕಿ ಹೇಳುತ್ತೇನೆ. ಅವನ ಹೆಸರಿನಲ್ಲಿ ಸುಳ್ಳು ಪ್ರಮಾಣ ಮಾಡುವುದು ಶಪಿಸಲ್ಪಟ್ಟ ಜನರ ಕೆಲಸವಾಗಿದೆ. ಅವನ ಹೆಸರಿನಲ್ಲಿ ಸುಳ್ಳು ಸೃಷ್ಟಿಸುವವನು ಅವನ ಶಿಕ್ಷೆಯಿಂದ ರಕ್ಷಿಸಲ್ಪಡಲಾರನು. ಈ ಲಾಹೋರ್ ನಗರದ ಟೆಂಪಲ್ ರೋಡ್ ಕ್ರಮಾಂಕ 13ರಲ್ಲಿ ಎಡ್ವಕೇಟ್ ಶೇಖ್ ಬಶೀರ್ ಅಹ್ಮದ್ ಸಾಹಿಬರ ಭವನದಲ್ಲಿ ಅಲ್ಲಾಹನು ನನಗೆ ತಿಳಿಸಿದನು ಮುಸ್ಲಿಹ್ ಮೌಊದ್ ಭವಿಷ್ಯವಾಣಿಯಲ್ಲಿ ಸೂಚಿಸಲ್ಪಟ್ಟವನು ನಾನೇ ಎಂದು. ಲೋಕದ ಎಲ್ಲೆಗಳ ತನಕ ಇಸ್ಲಾಮ್ ಯಾರ ಮೂಲಕ ತಲಪಲಿದೆಯೋ ಯಾರ ಮೂಲಕ ಏಕದೇವ ವಿಶ್ವಾಸ ಲೋಕದಲ್ಲಿ ಸ್ಥಾಪಿಸಲ್ಪಡುವುದೋ ಆ ಮುಸ್ಲಿಹ್ ಮೌಊದ್ ನಾನಾಗಿರುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಸ್ಲಿಹ್ ಮೌಊದರಿಗೆ ಸಂಬಂಧಿಸಿದ ಭವಿಷ್ಯವಾಣಿಯಲ್ಲಿ ವಾಗ್ದತ್ತ ಪುತ್ರನ ಬಗ್ಗೆ ವಿವರಿಸಿದ ಚಿಹ್ನೆಗಳು ಐವತ್ತಕ್ಕಿಂತ ಹೆಚ್ಚಿಗೆ ಇವೆ. ನಮ್ಮವರು ಮತ್ತು ಅನ್ಯರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಲ್ಲಿ ಈ ಚಿಹ್ನೆಗಳನ್ನು ಹೇಗೆ ಕಂಡರು ಎಂಬುದರ ಬಗ್ಗೆ ಈಗ ನಾನು ವಿವರಿಸುವೆನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ನಿಧನ ಹೊಂದಿದಾಗ ಸಿರಿಯಾ ದೇಶದ ಡಮಾಸ್ಕಸ್ ನಗರದ ಹಝ್ರತ್ ಸಯ್ಯಿದ್ ಅಬುಲ್ ಫರಶಿಲ್ ಹುಸ್ನೀ ಹೇಳಿದರು: ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ರವರ ವಫಾತ್‌ನಿಂದ ನಮ್ಮ ಹೃದಯಗಳಿಗೆ ಅತ್ಯಂತ ಹೆಚ್ಚು ದುಃಖ ಮತ್ತು ನೋವುಂಟಾಯಿತು. ಈ ನೋವು ಪ್ರತಿಯೊಬ್ಬ ಅಹ್ಮದಿಯ ಮೇಲೆ ಅತ್ಯಂತ ದುಃಖಕರ ಪ್ರಭಾವ ಉಂಟುಮಾಡಿತು. ಡಮಾಸ್ಕಸ್ ಜಮಾಅತ್‌ಗೆ ವಿಶಿಷ್ಟವಾಗಿ ಅತ್ಯಂತ ಹೆಚ್ಚು ದುಃಖವಾಗಿದೆ. ಏಕೆಂದರೆ ಡಮಾಸ್ಕಸ್ ಜಮಾಅತ್ ಹುಝೂರ್ ರಝಿಯಲ್ಲಾಹು ಅನ್‌ಹುರವರು ಸ್ವತಃ ನೆಟ್ಟ ಗಿಡವಾಗಿದೆ. ಅದನ್ನು ಅವರ ಅನುಗ್ರಹ ಭರಿತ ಕೈಗಳೇ ನೆಟ್ಟವು. ಅವರು ವಿಶಿಷ್ಟವಾಗಿ ಲಕ್ಷ್ಯನೀಡಿ ಆಧ್ಯಾತ್ಮಿಕತೆಯ ಜಲ ಹಾಯಿಸಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಯು ಸತ್ಯವೆಂದು ಅನ್ಯರು ಸಹ ಪ್ರಕಟಿಸುವಂತೆ ಅಲ್ಲಾಹನು ಮಾಡಿದನು. ಒಬ್ಬ ಗಣ್ಯ ಅಹ್ಮದಿಯೇತರ ವಿದ್ವಾಂಸ ಮೌಲವಿ ಸಮೀಉಲ್ಲಾ ಖಾನ್ ಸಾಹಿಬ್ ಫಾರೂಖೀ ಪಾಕಿಸ್ಥಾನ ಸ್ಥಾಪನೆಯ ಮೊದಲಿನ ಕಾಲಘಟ್ಟದಲ್ಲಿ 'ಇಝ್‌ಹಾರೆ ಹಖ್ಖ್' (ಸತ್ಯದ ಪ್ರಕಟಣೆ) ಎಂಬ ಶೀರ್ಷಿಕೆಯಲ್ಲಿ ಒಂದು ಕಿರುಲೇಖನ ಪ್ರಕಟಿಸಿದ್ದರು. ಅದರಲ್ಲಿ ಅವರು ಹೀಗೆ ಬರೆದರು: ಅವರಿಗೆ (ಎಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ) ಸಮಾಚಾರ ಲಭಿಸುತ್ತದೆ. ನಿನ್ನ ಜಮಾಅತಿಗೆ ನಿನ್ನದೇ ಸಂತಾನದಿಂದ ಒಬ್ಬನನ್ನು ಎಬ್ಬಿಸಿ ನಿಲ್ಲಿಸುವೆನು. ಅವನಿಗೆ ನನ್ನ ಸಾಮೀಪ್ಯ ಮತ್ತು ವಹೀ ದಯಪಾಲಿಸುವೆನು. ಅವನ ಮೂಲಕ ಸತ್ಯ ಅಭಿವೃದ್ಧಿ ಗಳಿಸುವುದು. ಅನೇಕ ಜನರು ಸತ್ಯವನ್ನು ಸ್ವೀಕರಿಸುವರು ಎಂದು. ಈ ಭವಿಷ್ಯವಾಣಿಯನ್ನು ಓದಿರಿ. ಪದೇ ಪದೇ ಓದಿರಿ. ಅನಂತರ ಸತ್ಯವಿಶ್ವಾಸದಿಂದ ಹೇಳಿರಿ. ಈ ಭವಿಷ್ಯವಾಣಿ ಈಡೇರಲಿಲ್ಲವೇ? ಈ ಭವಿಷ್ಯವಾಣಿ ಪ್ರಕಟಿಸಿದಾಗ ಈಗಿನ ಖಲೀಫ ಮಗುವಾಗಿಯೇ ಇದ್ದರು. ಅವರನ್ನು ಖಲೀಫರನ್ನಾಗಿ ಮಾಡಬೇಕೆಂದು ಮಿರ್ಝಾ ಸಾಹಿಬರು ಯಾವುದೇ ರೀತಿಯ ವಸೀಯತ್ ಸಹ ಮಾಡಿರಲಿಲ್ಲ. ಖಲೀಫರ ಚುನಾವಣೆಯನ್ನು ಜನರ ಅಭಿಪ್ರಾಯಕ್ಕೆ ಬಿಡಲಾಗಿತ್ತು. ಬಹುತೇಕ ಜನರು ಆಗ ಹಕೀಮ್ ನೂರುದ್ದೀನ್ ಸಾಹಿಬರನ್ನು ಖಲೀಫರೆಂದು ಅಂಗೀಕರಿಸಿದರು. ಆಗ ವಿರೋಧಿಗಳು ಭವಿಷ್ಯವಾಣಿ ಬಗ್ಗೆ ಲೇವಡಿ ಮಾಡಿದರು. ವಿರೋಧಿಗಳು ಹೇಳಿದರು: ನೋಡಿರಿ, ಪುತ್ರ ಖಲೀಫ ಆಗುವನೆಂದು ಹೇಳಿದ್ದರು ಪುತ್ರ ಖಲೀಫ ಆಗಲಿಲ್ಲ. ಆದರೆ ಹಕೀಮ್ ಸಾಹಿಬರು ನಿಧನ ಹೊಂದಿದ ನಂತರ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಖಲೀಫರಾದರು. ಅವರ ಕಾಲದಲ್ಲಿ ಅಹ್ಮದಿಯ್ಯತ್ ಅಭಿವೃದ್ಧಿಗೊಂಡದ್ದು ಆಶ್ಚರ್ಯಕರವಾದ ರೀತಿಯಲ್ಲಾಗಿದೆ ಎಂಬುದು ವಾಸ್ತವಿಕವಾಗಿದೆ. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಮಿರ್ಝಾ ಸಾಹಿಬರ ಭವಿಷ್ಯವಾಣಿ ಅಕ್ಷರಶಃ ಈಡೇರಿದೆ.

ಹಿಂದೂಸ್ಥಾನದ ಒಬ್ಬ ಮುಸ್ಲಿಮೇತರ ಸಿಖ್ ಪತ್ರಕರ್ತ, **ರಂಗೀನ್‌ಅಮೃತ್‌ಸರ್** ಪತ್ರಿಕೆಯ ಸಂಪಾದಕ, ಅರ್ಜುನ್ ಸಿಂಗ್ ಬರೆಯುತ್ತಾರೆ: ಈಗಿನ ಖಲೀಫರಾದ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹಿಬ್ ಬಾಲಕನಾಗಿದ್ದಾಗ 1901ರಲ್ಲಿ ಮಿರ್ಝಾ ಸಾಹಿಬರು ಹೀಗೆ ಭವಿಷ್ಯವಾಣಿ ಪ್ರಕಟಿಸಿದ್ದರು.

**ಬಶಾರತ್ ದೀ ಹೈ ಏಕ್ ಬೇಟಾ ಹೈ ತೇರಾ,**
**ಜೋ ಹೋಗಾ ಏಕ್ ದಿನ್ ಮಹ್‌ಬೂಬ್ ಮೇರಾ**

**ಕರೂಂಗಾ ದೂರ್ ಉಸ್ ಮೆಹ್‌ಸೆ ಅಂಧೇರಾ,**
**ದಿಖಾವೂಂಗಾ ಏಕ್ ಆಲಮ್ ಕೊ ಫೇರಾ**

**ಬಶಾರತ್ ಕ್ಯಾ ಹೈ ಏಕ್ ದಿಲ್ ಕಿ ಗಿಝಾದೀ,**
**ಫಸುಬ್‌ಹಾನಲ್ಲದೀ ಅಖ್‌ಝಲ್ ಅಆದೀ.**

*ಅರ್ಥ: ನನಗೆ ಶುಭವಾರ್ತೆ ನೀಡಿದ್ದಾನೆ: ನಿನಗೊಬ್ಬ ಪುತ್ರನಿದ್ದಾನೆ. ಅವನು ನನ್ನ ಪ್ರೀತಿಗೆ ಪಾತ್ರನಾಗುವನು. ಆ ಚಂದ್ರನ ಮೂಲಕ ಅಂಧಕಾರವನ್ನು ದೂರಸರಿಸುವೆನು. ಲೋಕಕ್ಕೆ ಒಂದು ಬದಲಾವಣೆಯನ್ನು ತೋರಿಸಿಕೊಡುವೆನು. ಇದೊಂದು ಶುಭವಾರ್ತೆ ಮಾತ್ರವಲ್ಲ ಹೃದಯಕ್ಕೆ ನೀಡಿದ ಒಂದು ಆಹಾರವೇ ಆಗಿದೆ. ನನ್ನ ಶತ್ರುಗಳನ್ನು ಹಿಡಿಗೂಡಿದವನು ಪರಿಶುದ್ಧನು.*

ಅರ್ಜುನ್ ಸಿಂಗ್ ಬರೆಯುತ್ತಾರೆ: ಈ ಭವಿಷ್ಯವಾಣಿ ನಿಸ್ಸಂಶಯವಾಗಿಯೂ ಆಶ್ಚರ್ಯಕರವಾಗಿದೆ. 1901ರಲ್ಲಿ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ದೊಡ್ಡ ವಿದ್ವಾಂಸರೇನೂ ಆಗಿರಲಿಲ್ಲ. ಅವರ ರಾಜಕೀಯ ಮುತ್ಸದ್ಧಿತನ ಸಹ ಆಗ ಪ್ರಕಟವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ನಿನ್ನ ಪುತ್ರ ಇಂತಿಂತಹ ಗುಣವುಳ್ಳವನು ಆಗುವನು ಎಂದು ಪ್ರಕಟಿಸುವುದು ಖಂಡಿತವಾಗಿಯೂ ಯಾವುದೋ ಆಧ್ಯಾತ್ಮಿಕ ಶಕ್ತಿಗೆ ಸಾಕ್ಷ್ಯಾಧಾರವಾಗಿದೆ. ಇದನ್ನು ಹೀಗೆ ಹೇಳಬಹುದಾಗಿದೆ: ಮಿರ್ಝಾ ಸಾಹಿಬರು ಒಂದು ವಾದವನ್ನು ಮಾಡಿ ಒಂದು ಪರಂಪರೆಗೆ ಅಸ್ತಿಭಾರ ಹಾಕಿದ ಕಾರಣ ಅವರು ತನ್ನ ನಂತರ ತನ್ನ ಸ್ಥಾನಕ್ಕೆ ತನ್ನ ಓರ್ವ ಪುತ್ರ ಬರುವನೆಂದು ಊಹಿಸಿರಬಹುದೆಂದು. ಆದರೆ ಹೀಗೆ ಯೋಚಿಸುವುದು ತಪ್ಪಾಗಿದೆ. ಏಕೆಂದರೆ ನನ್ನ ನಂತರ ನನ್ನ ಕುಟುಂಬದಿಂದ

ಅಥವಾ ಮಕ್ಕಳಿಂದ ಖಲೀಫರಾಗಬೇಕೆಂಬ ಶರತ್ತನ್ನು ಮಿರ್ಝಾ ಸಾಹಿಬರು ವಿಧಿಸಿರಲಿಲ್ಲ. ಪ್ರಥಮ ಖಲೀಫರಾದವರು ಮಿರ್ಝಾ ಸಾಹಿಬರ ಕುಟುಂಬದೊಂದಿಗೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಪ್ರಥಮ ಖಲೀಫ ಹಕೀಮ್ ನೂರುದ್ದೀನ್ ಸಾಹಿಬರ ನಂತರ ಸಹ ಬೇರೆ ಒಬ್ಬರು ದ್ವಿತೀಯ ಖಲೀಫರಾಗುವ ಸಾಧ್ಯತೆ ಇತ್ತು. ಆ ಸಂದರ್ಭದಲ್ಲಿ ಮೌಲವಿ ಮುಹಮ್ಮದ್ ಅಲಿ (ಅಮೀರ್ ಜಮಾಅತ್ ಲಾಹೋರ್) ಖಿಲಾಫತ್‌ಗೆ ಅಭ್ಯರ್ಥಿಯಾಗಿದ್ದರು. ಆದರೆ ಬಹುಪಕ್ಷದವರು ಮಿರ್ಝಾ ಬಶೀರುದ್ದೀನ್ ಸಾಹಿಬರನ್ನು ಬೆಂಬಲಿಸಿದರು. ಆದುದರಿಂದ ಅವರು ಖಲೀಫರಾದರು. ಈಗ ಪ್ರಶ್ನೆ ಏನೆಂದರೆ ಹಿರಿಯ ಮಿರ್ಝಾ ಸಾಹಿಬರಲ್ಲಿ ಯಾವುದೋ ಒಂದು ಆಧ್ಯಾತ್ಮಿಕ ಶಕ್ತಿ ಕಾರ್ಯನಿರತವಾಗಿ ಇರದಿರುತ್ತಿದ್ದರೆ ಅವರಿಗೆ ತನ್ನೊಬ್ಬ ಮಗ ಹಾಗೆ ಆಗುವನೆಂದು ಹೇಗೆ ತಿಳಿಯಿತು. ಭವಿಷ್ಯವಾಣಿ ಬಗ್ಗೆ ಪ್ರಕಟಿಸಿದ ಕಾಲದಲ್ಲಿ ಮಿರ್ಝಾ ಸಾಹಿಬರಿಗೆ ಮೂವರು ಪುತ್ರರಿದ್ದರು. ಅವರು ತನ್ನ ಮೂವರು ಪುತ್ರರಿಗೋಸ್ಕರವೂ ಪ್ರಾರ್ಥನೆ ಮಾಡುತ್ತಿದ್ದರು. ಆದರೆ ಭವಿಷ್ಯವಾಣಿ ಒಬ್ಬ ಪುತ್ರನ ಬಗ್ಗೆ ಮಾತ್ರವಾಗಿತ್ತು. ಈಗ ನಾವು ನೋಡುತ್ತಿದ್ದೇವೆ, ಆ ಪುತ್ರ ಹಾಗೆಯೇ ಆದನು. ಅವರು ಲೋಕದಲ್ಲಿ ಪರಿವರ್ತನೆ ಉಂಟುಮಾಡಿದರು.

ವಾಗ್ದತ್ತ ಪುತ್ರನ ಆಗಮನದ ಉದ್ದೇಶಲಕ್ಷ್ಯ ಇಸ್ಲಾಮ್ ಧರ್ಮದ ಘನತೆಯನ್ನು ಮತ್ತು ಪವಿತ್ರ ಖುರ್‌ಆನಿನ ಶ್ರೇಷ್ಠತೆಯನ್ನು ಜನರಿಗೆ ಸ್ಪಷ್ಟಪಡಿಸಿ ಕೊಡುವುದಾಗಿತ್ತು. ಅವಿಭಜಿತ ಹಿಂದೂಸ್ಥಾನದ ಪ್ರಸಿದ್ಧ ಮುಸ್ಲಿಮ್ ನಾಯಕ ಮತ್ತು ಕವಿ ಆಗಿದ್ದ ಮೌಲವಿ ಝಫರ್ ಅಲಿ ಖಾನ್ ಸಾಹೆಬರು, ಅವರು ಝಮೀನ್‌ದಾರ್ ಪತ್ರಿಕೆಯ ಸಂಪಾದಕರೂ ಆಗಿದ್ದರು, ಅವರು ಸ್ಪಷ್ಟವಾಗಿ ತಮ್ಮ ಜನರೊಂದಿಗೆ ಹೇಳಿದರು: ನೀವು ನಿಮ್ಮ ಕಿವಿಗಳನ್ನು ತೆರೆದುಕೊಂಡು ನನ್ನ ಮಾತುಗಳನ್ನು ಆಲಿಸಿರಿ. ನೀವು ಮತ್ತು ನಿಮ್ಮೊಂದಿಗೆ ಜೋಡಿಸಿಕೊಂಡಿರುವವರು ಮಿರ್ಝಾ ಮಹ್‌ಮೂದರನ್ನು ಖಿಯಾಮತ್ ತನಕ ಸಹ ಎದುರಿಸಲು ಸಾಧ್ಯವಿಲ್ಲ. ಮಿರ್ಝಾ ಮಹ್‌ಮೂದರ ಬಳಿಯಲ್ಲಿ ಖುರ್‌ಆನ್ ಇದೆ ಮತ್ತು ಖುರ್‌ಆನಿನ ಜ್ಞಾನವಿದೆ. ನಿಮ್ಮ ಬಳಿ ಇರುವುದಾದರೂ ಏನು? ನೀವು ಸ್ವಪ್ನದಲ್ಲಿ ಸಹ ಖುರ್‌ಆನನ್ನು ಓದಲಿಲ್ಲ. ಮಿರ್ಝಾ ಮಹ್‌ಮೂದರಿಗೆ ಎಂತಹ ಒಂದು ಜಮಾಅತ್ ಇದೆ ಎಂದರೆ ಅವರು ಒಂದು ಸಂಜ್ಞೆ ಮಾಡಿದರೆ ತಮ್ಮ ತನು, ಮನ, ಧನವನ್ನು ಅವರ ಪಾದಗಳಿಗೆ ಅರ್ಪಿಸಲು ಸಿದ್ಧವಾಗಿರುತ್ತದೆ. ಮಿರ್ಝಾ ಮಹ್‌ಮೂದರ ಬಳಿಯಲ್ಲಿ ಮುಬಲ್ಲಿಗರಿದ್ದಾರೆ. ಅವರು ವಿವಿಧ ಜ್ಞಾನಗಳ ತಜ್ಞರಾಗಿದ್ದಾರೆ. ಲೋಕದ ಪ್ರತಿಯೊಂದು ದೇಶದಲ್ಲಿ ಮಿರ್ಝಾ ಮಹ್‌ಮೂದ್ ತನ್ನ ಪತಾಕೆಯನ್ನು ಸ್ಥಾಪಿಸಿದ್ದಾರೆ.

ಪವಿತ್ರ ಖುರ್‌ಆನಿನ ಪ್ರಸಿದ್ಧ ವ್ಯಾಖ್ಯಾನಗಾರ ಅಲ್ಲಾಮ ಅಬ್ದುಲ್ ಮಾಜಿದ್ ದರಿಯಾಬಾದಿ, ಸಿದ್‌ಖೆ ಜದೀದ್ ಪತ್ರಿಕೆಯ ಸಂಪಾದಕರೂ ಆಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ನಿಧನ ಹೊಂದಿದಾಗ ಅವರು ತನ್ನ ಪತ್ರಿಕೆಯ ಸಂಪಾದಕೀಯ ಲೇಖನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಪವಿತ್ರ ಖುರ್‌ಆನಿಗೆ ಅರ್ಪಿಸಿದ ಸೇವೆಯ ಬಗ್ಗೆ ಪ್ರಶಂಸಿಸುತ್ತಾ ಬರೆಯುತ್ತಾರೆ: ಪವಿತ್ರ ಖುರ್‌ಆನನ್ನು ಮತ್ತು ಪವಿತ್ರ ಖುರ್‌ಆನಿನ ಜ್ಞಾನವನ್ನು ಜಾಗತಿಕವಾಗಿ ಪ್ರಚಾರ ಮಾಡಲು, ಇಸ್ಲಾಮನ್ನು ಜಾಗತಿಕ ಮಟ್ಟದಲ್ಲಿ ತಬ್ಲೀಗ್ ಮಾಡಲು ಅವರು ದೃಢನಿರ್ಧಾರದೊಂದಿಗೆ ತನ್ನ ದೀರ್ಘ ಕಾಲದ ಜೀವಿತದಲ್ಲಿ ಮಾಡಿದ ಪ್ರಯತ್ನಗಳಿಗೆ ಅಲ್ಲಾಹನು ಅವರಿಗೆ ಉತ್ತಮ ಪ್ರತಿಫಲವನ್ನು ದಯಪಾಲಿಸಲಿ. ಪವಿತ್ರ ಖುರ್‌ಆನಿನ ವಾಸ್ತವಿಕತೆ ಮತ್ತು ಸೂಕ್ಷ್ಮಜ್ಞಾನದ ಬಗ್ಗೆ ಅವರು ನೀಡಿದ ವ್ಯಾಖ್ಯಾನಗಳು ಉನ್ನತ ಮಟ್ಟದ್ದೂ ವೈಶಿಷ್ಟ್ಯಪೂರ್ಣವೂ ಆಗಿವೆ.

ಒಬ್ಬ ಅಮೇರಿಕನ್ ಪಾದರಿ ಒಮ್ಮೆ ಖಾದಿಯಾನಿಗೆ ಆಗಮಿಸಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರನ್ನು ಭೇಟಿಯಾಗಿದ್ದರು. ತನ್ನ ಪ್ರಶ್ನೆಗಳಿಗೆ ಉತ್ತರವನ್ನು ಆಲಿಸಿದ ನಂತರ ಆ ಪಾದರಿ ಹೇಳಿದರು: ಇಂತಹ ವಿವೇಕ ಭರಿತ ಮಾತುಗಳನ್ನು ಮತ್ತು ಸಾಕ್ಯಧಾರಗಳನ್ನು ಯಾರ ಬಾಯಿಯಿಂದಲೂ ನಾನು ಇಂದಿನ ತನಕ ಕೇಳಲಿಲ್ಲ. ನಿಮ್ಮ ಖಲೀಫರು ಬಹಳ ದೊಡ್ಡ ವಿದ್ವಾಂಸರಾಗಿದ್ದಾರೆ. ಜಾಗತಿಕ ಧರ್ಮಗಳ ಬಗ್ಗೆ ಅವರ ದೃಷ್ಟಿ ಬಹಳ ಆಳವಾಗಿದೆ. ಹೀಗೆ ಹೇಳಿ ಆ ಪಾದರಿ ಬಹಳ ಆದರದಿಂದ ಹಝ್ರತ್ ಖಲೀಫತುಲ್ ಮಸೀಹರ ಕೈಯನ್ನು ಚುಂಬಿಸಿ ಅಲ್ಲಿಂದ ಹಿಂದಿರುಗಿದರು. 1945 ಫೆಬ್ರವರಿ ತಿಂಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಲಾಹೋರಿನ ಅಹ್ಮದಿಯಾ ಹಾಸ್ಪಿಟಲ್‌ನಲ್ಲಿ ಇಸ್ಲಾಮಿನ ಸಾಂಪತ್ತಿಕ ಪದ್ಧತಿ ಎಂಬ ಶೀರ್ಷಿಕೆಯಲ್ಲಿ ಒಂದು ವೈಭವಶಾಲಿ ಭಾಷಣ ನೀಡಿದರು. ಭಾಷಣದ ನಂತರ ಸಭೆಯ ಅಧ್ಯಕ್ಷರಾದ ಶ್ರೀ ಲಾಲಾ ರಾಮ್‌ಚಂದ್ ಮಚಂದಾ ಒಂದು ಸಂಕ್ಷಿಪ್ತ ಭಾಷಣದಲ್ಲಿ ಹೀಗೆ ಹೇಳಿದರು: ಇಂತಹ ಅಮೂಲ್ಯ ಭಾಷಣ ಆಲಿಸುವ ಸಂದರ್ಭ ಲಭಿಸಿರುವುದು ನನಗೆ ದೊರೆತ ಸೌಭಾಗ್ಯವೆಂದು ನಾನು ಗಣಿಸುತ್ತೇನೆ. ನೀವು ಈಗ ಆಲಿಸಿದ ಭಾಷಣದಲ್ಲಿ ಅತ್ಯಂತ ಅಮೂಲ್ಯವಾದ ಮತ್ತು ಹೊಸದಾದ ವಿಷಯಗಳನ್ನು ಹುಝೂರ್ ವಿವರಿಸಿದ್ದಾರೆ. ನನಗೆ ಈ ಭಾಷಣದಿಂದ ಬಹಳ ಪ್ರಯೋಜನ ಲಭಿಸಿದೆ. ನೀವು ಸಹ ಅವರು ನೀಡಿದ ಅಮೂಲ್ಯ ಮಾಹಿತಿಗಳಿಂದ ಲಾಭ ಪಡೆದಿರಬಹುದೆಂದು ನಾನು ಭಾವಿಸುತ್ತೇನೆ. ನಾನು ನನ್ನ ಪರವಾಗಿಯೂ ಮತ್ತು ನಿಮ್ಮೆಲ್ಲರ ಪರವಾಗಿಯೂ ಅಹ್ಮದಿಯಾ ಜಮಾಅತಿನ ಬಹುಮಾನ್ಯ ಇಮಾಮರಿಗೆ ಅನಂತಾನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅವರು ತಮ್ಮ ಅತ್ಯಂತ ಅಮೂಲ್ಯ ಮಾಹಿತಿಗಳಿಂದ ಭರಿತವಾದ ಭಾಷಣದಿಂದ ನಮಗೆ ಲಾಭ ನೀಡಿದ್ದಾರೆ.

ಜನಾಬ್ ಅಖ್ತರ್ ಓರಿನವೀ ಸಾಹಿಬ್ ಎಂ. ಎ., ಪಾಟ್ನ ಯುನಿವರ್ಸಿಟಿಯ ಉರ್ದು ವಿಭಾಗದ ಅಧ್ಯಕ್ಷರಾಗಿದ್ದರು. ಅವರು ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ತಫ್‌ಸೀರ್ ಕಬೀರ್ ಗ್ರಂಥದ ಕೆಲವು ಸಂಪುಟಗಳನ್ನು ಒಂದರ ನಂತರ ಇನ್ನೊಂದಾಗಿ ಫಾರ್ಸಿ ವಿಭಾಗದ ಮಾಜಿ ಅಧ್ಯಕ್ಷರಾದ ಪ್ರೊಫೆಸರ್ ಅಬ್ದುಲ್ ಮನ್ನಾನ್ ಬೇದಿಲ್ ಸಾಹಿಬರಿಗೆ ಓದಲು ನೀಡಿದ್ದೆ. ಅವರು ತಫ್‌ಸೀರ್‌ಗಳನ್ನು ಓದಿ ಎಷ್ಟು ಪ್ರಭಾವಿತರಾದರೆಂದರೆ ಅವರು ಮದ್ರಸ ಅರಬಿಯಾ ಶಮ್ಸುಲ್ ಹುದಾ ಪಾಟ್ನದ ಕೆಲವು ಅಧ್ಯಾಪಕರಿಗೆ ತಫ್‌ಸೀರಿನ ಕೆಲವು ಸಂಪುಟಗಳನ್ನು ಓದಲು ನೀಡಿದರು. ನಂತರ ಅಧ್ಯಾಪಕರನ್ನು ಕರೆದು ಅವರ ಅಭಿಪ್ರಾಯಗಳನ್ನು ವಿಚಾರಿಸಿದರು. ಒಬ್ಬ ಅಧ್ಯಾಪಕರು ಹೇಳಿದರು: ಫಾರಸೀ ತಫ್‌ಸೀರ್‌ಗಳಲ್ಲಿ ಇಂತಹ ತಫ್‌ಸೀರ್ ಲಭ್ಯವಿಲ್ಲ. ಪ್ರೊಫೆಸರ್ ಅಬ್ದುಲ್ ಮನ್ನಾನ್

ಸಾಹಿಬ್ ಕೇಳಿದರು: ಅರಬಿ ತಫ್‌ಸೀರ್‌ಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು. ಅಧ್ಯಾಪಕರು ಮೌನವಾಗಿದ್ದರು. ಅನಂತರ ಸ್ವಲ್ಪ ಸಮಯದ ನಂತರ ಒಬ್ಬ ಅಧ್ಯಾಪಕ ಹೇಳಿದರು: ಪಾಟ್ನದಲ್ಲಿ ಎಲ್ಲ ಅರಬಿ ತಫ್‌ಸೀರ್‌ಗಳು ಲಭ್ಯವಿಲ್ಲ. ಈಜಿಪ್ಟ್ ಮತ್ತು ಸಿರಿಯಾದ ಎಲ್ಲ ತಫ್‌ಸೀರ್‌ಗಳನ್ನು ಅಧ್ಯಯನ ಮಾಡಿದ ನಂತರ ಮಾತ್ರ ಸರಿಯಾದ ಅಭಿಪ್ರಾಯ ಹೇಳಲು ಸಾಧ್ಯ ಎಂದು ಹೇಳಿದರು. ಪ್ರೊಫೆಸರ್ ಸಾಹಿಬರು ಪುರಾತನ ಅರಬಿ ತಫ್‌ಸೀರ್‌ಗಳ ಬಗ್ಗೆ ವಿವರಿಸಿ ಹೇಳಿದರು. ಮಿರ್ಝಾ ಮಹ್‌ಮೂದ್ ಸಾಹಿಬರು ಬರೆದ ತಫ್‌ಸೀರಿನ ಮಟ್ಟಕ್ಕೆ ಸಮ ಹೋಲುವ ಯಾವುದೇ ಒಂದು ತಫ್‌ಸೀರ್ ಯಾವುದೇ ಭಾಷೆಯಲ್ಲಿ ಲಭಿಸಲಾರದು. ನೀವು ಈಜಿಪ್ಟ್ ಮತ್ತು ಸಿರಿಯಾದಿಂದ ಆಧುನಿಕ ತಫ್‌ಸೀರ್‌ಗಳನ್ನು ತರಿಸಿ ಓದಿ ಕೆಲವು ತಿಂಗಳ ನಂತರ ನನ್ನೊಂದಿಗೆ ಮಾತನಾಡಿರಿ. ಆಗ ಅಲ್ಲಿದ್ದ ಅರಬಿ ಮತ್ತು ಫಾರಸೀ ಭಾಷೆಯ ವಿದ್ವಾಂಸರಾದ ಆ ಅಧ್ಯಾಪಕರು ತಬ್ಬಿಬ್ಬಾದರು.

ಒಂದು ವಾರಪತ್ರಿಕೆಯಾದ ಪಾರಸ್‌ನ ಸಂಪಾದಕ ಲಾಲಾ ಕರಮ್‌ಚಂದ್ ಕೆಲವು ಪತ್ರಕರ್ತರೊಂದಿಗೆ ಖಾದಿಯಾನಿಗೆ ಹೋಗಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರನ್ನು ಭೇಟಿಯಾಗಿ ಬಹಳ ಪ್ರಭಾವಿತರಾಗಿ ಮರಳಿದರು ಮತ್ತು ತಮ್ಮ ಪತ್ರಿಕೆಯಲ್ಲಿ ಅವರು ಹೀಗೆ ಬರೆದರು: ನಾವು ಝಫರುಲ್ಲಾ ಖಾನ್‌ರನ್ನು ಬಹಳ ದೊಡ್ಡ ಮನುಷ್ಯ ಎಂದು ಭಾವಿಸಿದ್ದೆವು. ಆದರೆ ಬಶೀರುದ್ದೀನ್ ಮಹ್‌ಮೂದರ ಎದುರಿಗೆ ಅವರ ಸ್ಥಾನ ಒಬ್ಬ ಬಾಲಕನಾದ ವಿದ್ಯಾರ್ಥಿಯ ಹಾಗಿದೆ. ಅವರು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಅವರಿಗಿಂತ ಅತ್ಯುತ್ತಮ ಅಭಿಪ್ರಾಯ ಹೊಂದಿದ್ದಾರೆ. ಅತ್ಯುತ್ತಮವಾದ ಸಾಕ್ಷ್ಯಾಧಾರಗಳನ್ನು ನೀಡುತ್ತಾರೆ. ಅವರು ವ್ಯವಸ್ಥೆ ಸ್ಥಾಪಿಸುವ ಬಗ್ಗೆ ಅತ್ಯುತ್ತಮ ಪರಿಣತಿ ಹೊಂದಿದ್ದಾರೆ. ಇಂತಹ ವ್ಯಕ್ತಿ ಯಾವುದಾದರೂ ರಾಜ್ಯಾಡಳಿತೆಯನ್ನು ಅತ್ಯುನ್ನತ ಪ್ರಗತಿಗೆ ತಲಪಿಸಬಹುದಾಗಿದೆ.

ಒಬ್ಬ ಜ್ಞಾನಿಯಾದ ಹಿರಿಯ ವ್ಯಕ್ತಿ ಖಾದಿಯಾನಿನ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ಮುಸ್ಲಿಹ್ ಮೌಊದರ ಬಗ್ಗೆ ಮತ್ತು ಅವರ ಅನುಯಾಯಿಗಳ ಬಗ್ಗೆ ಈ ರೀತಿ ಅಭಿಪ್ರಾಯ ಹೇಳಿದರು: ನಾನು ಒಂದು ವಿಷಯ ಬಹಳ ಗಾಢವಾಗಿ ಅಧ್ಯಯನ ಮಾಡಿ ನೋಡಿದೆ. ಅಲ್ಲಿ ಜಮಾಯಿಸಿದ ಎಲ್ಲರೂ ಪರಿಶುದ್ಧರಾದ ಖಲೀಫರ ಒಂದು ಕಿರುಬೆರಳಿನ ಸಂಜ್ಞೆಗೆ ಅನುಸಾರವಾಗಿ ಚಲಿಸುತ್ತಿದ್ದರು. ಹಝ್ರತ್ ಇಮಾಮ್ ಜಮಾಅತ್ ಅಹ್ಮದಿಯಾ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ ಅವರು ಲೇಖನಿಯ ಧನಿಯಾಗಿದ್ದಾರೆ, ಭಾಷಣದ ಉನ್ನತ ಮಟ್ಟದ ಮಾಲಿಕರೂ ಆಗಿದ್ದಾರೆ, ಆಡಳಿತೆ ವ್ಯವಸ್ಥೆಯ ಅತ್ಯುನ್ನತ ಮಟ್ಟದ ಗವರ್ನರ್ ಸಹ ಆಗಿದ್ದಾರೆ.

ಒಟ್ಟಿನಲ್ಲಿ ಇವು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಬಗ್ಗೆ ನಮ್ಮವರ ಮತ್ತು ಅನ್ಯರ ಅಭಿಪ್ರಾಯಗಳಾಗಿವೆ. ಇವು ಭವಿಷ್ಯವಾಣಿಯ ಸತ್ಯತೆ ಬಗ್ಗೆ ಬಹಿರಂಗ ಅಭಿಪ್ರಾಯ ಪ್ರಕಟಣೆ ಆಗಿವೆ. ಈಗ ಜಮಾಅತ್‌ಗಳಲ್ಲಿ ನಡೆಯುತ್ತಿರುವ ಜಲ್ಸಗಳಲ್ಲಿ ಭವಿಷ್ಯವಾಣಿಯ ಬಗ್ಗೆ ಪ್ರಸ್ತಾಪಿಸುವುದರೊಂದಿಗೆ ಅವರು ಮಾಡಿದ ಮಹತ್ವದ ಕೆಲಸಗಳ ಬಗ್ಗೆ ಆಲಿಸಿ ಅವರಿಗೋಸ್ಕರ ಅಲ್ಲಾಹನು ಅವರ ಪದವಿಯನ್ನು ಉನ್ನತ ಗೊಳಿಸುತ್ತಾ ಇರಲಿ ಎಂದು ಪ್ರಾರ್ಥಿಸಬೇಕಲ್ಲದೆ ನಾವು ನಮ್ಮ ಸ್ಥಿತಿಯನ್ನು ಸಹ ಪರಿಶೋಧಿಸಬೇಕು. ಅಹ್ಮದಿಯ್ಯತ್ತಿನ ಅಭಿವೃದ್ಧಿಗೋಸ್ಕರ ಜಮಾಅತಿನ ಪ್ರತಿಯೊಬ್ಬ ಸದಸ್ಯ ದೃಢ ನಿಶ್ಚಯದೊಂದಿಗೆ ತನ್ನ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಕಾರ್ಯನಿರತನಾಗುವುದು ಆವಶ್ಯಕವಾಗಿದೆ. ನಾವು ಹೀಗೆ ಕಾರ್ಯ ತತ್ಪರರಾದರೆ ನಮ್ಮ ಜೀವಿತ ಕಾಲದಲ್ಲಿಯೇ ಅಹ್ಮದಿಯ್ಯತ್ತಿನ ಅಭಿವೃದ್ಧಿ ಮೊದಲಿಗಿಂತ ಹೆಚ್ಚಾಗಿ ಈಡೇರುವುದಾಗಿ ಕಾಣುವೆವು. ಅಲ್ಲಾಹನು ನಮಗೆ ಅಂತಹ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***(atba)

*At Masjid Baithul Futhuh, London. On 23-02-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon